**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 181/2017**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ** 04-12-2024 **ಡಿ ಡಬ್ಲ್ಯೂ** 2

**ಪಾಟೀ ಸವಾಲುಃ ವಾದಿ ಪರ ಶ್ರೀ ಇ ಎಂ ವಕೀಲರಿಂದಃ**

ನಾನು ಕೋ ಆಪ್ ಸೊಸೈಟಿಯಲ್ಲಿ ಸಿ ಇ ಒ ಆಗಿ ಕೆಲಸ ಮಾಡುತ್ತಿದ್ದೇನೆ. ಸದರಿ ಕೆಲಸವನ್ನು ಸುಮಾರು 15 ವರ್ಷಗಳಿಂದ ಮಾಡುತ್ತಿದ್ದೇನೆ. ನನಗೆ ಸೊಸೈಟಿಯಲ್ಲಿ ಹಣ ಕೊಡುವ ಪಡೆದುಕೊಳ್ಳುವ ಮತ್ತು ಹಣದ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಅದೇ ರೀತಿ ಸಾಲವನ್ನು ಕೊಡಲು ಯಾವ ಯಾವ ದಾಖಲೆಗಳನ್ನು ನೋಡಬೇಕು ಎಂದು ನನಗೆ ತಿಳಿದಿದೆ. ನಮ್ಮ ಸೊಸೈಟಿಯಲ್ಲಿ ಸಾಲವನ್ನು ಪಡೆಯಲು ಗ್ರಾಹಕರು ಹಾಜರುಪಡಿಸಿಸುವ ದಾಖಲೆಗಳನ್ನು ನಾನು ಪರಶೀಲನೆ ಮಾಡುತ್ತೇನೆ ಎಂದರೆ ಸರಿ.

ಈ ದಾವೆಯಲ್ಲಿ ನನ್ನ ತಂದೆ ಸಲ್ಲಿಸಿದ ತಕರಾರಿನ ಅಂಶಗಳನ್ನು ಹಾಗೂ ಅವರು ಸಲ್ಲಿಸಿದ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ನಾನು ಈ ನ್ಯಾಯಾಲಯದಲ್ಲಿ ಈ ದಿನ ಸಾಕ್ಷ್ಯವನ್ನು ನನ್ನ ತಂದೆ ನೀಡಿದ ಅಧಿಕಾರ ಪತ್ರ ನಿಡಿ.30 ರ ಆದಾರದ ಮೇಲೆ ಸಾಕ್ಷ್ಯವನ್ನು ನೀಡುತ್ತಿದ್ದೇನೆ. ನಿಡಿ.30 ರಲ್ಲಿ ನನ್ನ ಮತ್ತು ನನ್ನ ತಂದೆಯ ಗುರುತಿನ ಚೀಟಿಯ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ಸರಿ. ನಿಡಿ.30 ರಲ್ಲಿ ಯಾವ ಸ್ವತ್ತಿಗೆ ಸಂಬಂದಿಸಿದಂತೆ ಅದಿಕಾರ ಪತ್ರವನ್ನು ನೀಡಿರುತ್ತಾರೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಓ ಎಸ್ ನಂ. 181/2017 ರಲ್ಲಿ ಸಾಕ್ಷ್ಯವನ್ನು ನೀಡಲು ಅಧಿಕಾರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ.30 ರಲ್ಲಿ ಓ ಎಸ್ ನಂ. 181/2017 ನ್ನು ಹೊರತು ಪಡಿಸಿ ಆಸ್ತಿಯ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿಡಿ.30 ರಲ್ಲಿ ನನ್ನ ತಂದೆ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಬರೆಸಿಲ್ಲ ಎಂದರೆ ಸರಿ. ನಿಡಿ.30 ರಲ್ಲಿ ನನ್ನ ಒಪ್ಪಿಗೆ ಇದೆ ಎಂದು ನಮೂದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಒಪ್ಪಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ.30 ನ್ನು ನೋಟರಿಯವರ ಸಮಕ್ಷಮ ಮಾಡಲಾಗಿದೆ ಎಂದರೆ ಸರಿ. ನೋಟರಿಯವರ ಬಳಿ ನನ್ನ ತಂದೆ ಹೋಗಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಹಿ ಮಾಡಿಸಿಕೊಂಡು ನಾನೇ ನೊಟರಿ ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಡಿ.30 ರಲ್ಲಿ ಇಬ್ಬರು ನನ್ನ ಸಮಕ್ಷಮ ರುಜು ಮಾಡಿದ್ದಾರೆ ಎಂದು ನಮೂದು ಇಲ್ಲ ಎಂದರೆ ಸರಿ. ನಿಡಿ.30 ಲೋಪದೋಷಗಳಿಂದ ಕೂಡಿದ್ದು ನಾನು ಸಾಕ್ಷ್ಯ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ನನ್ನ ತಂದೆ ಮೂಲ ಕ್ರಯ ಪತ್ರ, ಇ ಸ್ವತ್ತು, ಖಾತಾ ಎಕ್ಸಟ್ರಾಕ್ಟ ಗಳನ್ನು ಸಲ್ಲಿಸಿರುತ್ತೇನೆ. ನಿಡಿ.2 ರಲ್ಲಿ ಮಾರಾಟ ಮಾಡಿದ ವ್ಯಕ್ತಿಗೆ ಆಸ್ತಿ ಯಾವ ಮೂಲದಿಂದ ಬಂದಿರುತ್ತದೆ ಎಂದು ನಮೂದು ಇಲ್ಲ ಎಂದರೆ ಸರಿ. ನಿಡಿ.2 ರಲ್ಲಿ ನಮೂದಿಸಿದ ಆಸ್ತಿಯ ಸೈಟ್ ನಂ. 18 ಅಲ್ಲ 9 ಎಂದು

ನಮೂದು ಇದೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಈ ರೀತಿ ಬರೆಯಲಾಗಿದೆ ಎಂದು ನಿರ್ದಿಷ್ಟವಾಗಿ ನಿಡಿ.2 ರಲ್ಲಿ ಹೇಳಿಲ್ಲ ಎಂದರೆ ಸರಿ. ಅದೇ ರೀತಿ ನಿಡಿ.2 ರಲ್ಲಿ ಪೂರ್ವಕ್ಕೆ ಕಣ 10 ನೇ ನಂಬರ್ ಸೈಟ್ ಅಲ್ಲ ಗುತ್ತೂರಿಗೆ ಹೋಗುವ ರಸ್ತೆ ಎಂದು ಬರೆಯಲಾಗಿದೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಈ ರೀತಿ ಬರೆಯಲಾಗಿದೆ ಎಂದು ನಿರ್ದಿಷ್ಟವಾಗಿ ನಿಡಿ.2 ರಲ್ಲಿ ಹೇಳಿಲ್ಲ ಎಂದರೆ ಸರಿ. ನಿಡಿ.2 ದಾಖಲೆ ನೋಂದಾವಣಿಯಾಗುವ ಸಂದರ್ಭದಲ್ಲಿ ನನಗೆ ಸುಮಾರು 8 ವರ್ಷ ಇರಬಹುದು. ನಿಡಿ.2 ರ ಬಗ್ಗೆ ನನಗೆ ತಿಳುವಳಿಕೆ ಬಂದಾಗಿನಿಂದಲೂ ತಿಳಿದಿದೆ. ನಿಡಿ.2 ನ್ನು ಶಿವರುದ್ರಪ್ಪನವರೊಂದಿಗೆ ನಾನು ತಿದ್ದುಪಡಿ ಮಾಡಿಕೊಂಡಿಲ್ಲ ಎಂದರೆ ಸರಿ. ಶಿವರುದ್ರಪ್ಪನವರಿಗೆ ನಿಡಿ.2 ರಲ್ಲಿರುವ ಆಸ್ತಿ ಪಾಲು ವಿಭಾಗದ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 18.09.1958 ರಲ್ಲಿ ಹಾಲಪ್ಪ ಮತ್ತು ಹಾಲಪ್ಪನ ಮಕ್ಕಳಾದ 1 ನೇ ಹಾಲಪ್ಪ ಮತ್ತು 2 ನೇ ಶಿವರುದ್ರಪ್ಪ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗದಲ್ಲಿ ಶಿವರುದ್ರಪ್ಪನವರಿಗೆ ಹರ್ಲಾಪುರ ಗ್ರಾಮದ ಖಾನೇಶುಮಾರಿ ನಂ. 335/1 ಮತ್ತು 336/1 ಎಂದು ಬಂದಿದೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಪಾಲು ವಿಭಾಗ ಪತ್ರ ತೋರಿಸಲಾಗಿ ಸದರಿ ಪಾಲು ವಿಭಾಗ ಪತ್ರದ ಖಾನೇಶುಮಾರಿ ನಂ. 335/1 ಮತ್ತು 336/1 ಎಂದು ಸೂಚಿಸಿದ್ದು ನಮ್ಮ ಆಸ್ತಿಯ ಸಂಖ್ಯೆ ಸಹ ಅದೇ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ಮುಖಾಬಿಲೆಯಾಗಿ ನಿಪಿ.19 ಎಂದು ಗುರುತಿಸಲಾಯಿತು. ನಿಪಿ.19 ರಲ್ಲಿ ಖಾನೇಶುಮಾರಿ ನಂ. 335/1 ಮತ್ತು 336/1 ಆಸ್ತಿಗೆ ಇರುವ ಚೆಕ್ ಬಂದಿಯೇ ನಮ್ಮ ಆಸ್ತಿ ಚೆಕಬಂದಿ ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ನನಗೆ ಈ ಪಾಲು ವಿಭಾಗದ ಬಗ್ಗೆ ಮಾಹಿತಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.19 ರ ಪ್ರಕಾರ ನಮ್ಮ ಆಸ್ತಿಯ ಚೆಕಬಂದಿ ಇಲ್ಲದೇ ಇರುವ ಕಾರಣ ನಿಡಿ.2 ಕ್ರಯಪತ್ರ ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ವಿಚಾರವಾಗಿ ಗಲಾಟೆಯಾಗಿ ವಿಷಯ ಪೊಲೀಸ್ ಠಾಣೆವರೆಗೂ ಹೋಗಿತ್ತು ಎಂದರೆ ಸಾಕ್ಷಿಯು ನನ್ನ ತಂದೆ ಹೇಳಿದ್ದರು ಎಂದು ನುಡಿಯುತ್ತಾರೆ. ನಿಡಿ.16 ನನ್ನ ಗಮನಕ್ಕೆ ಇಲ್ಲ. ನಿಡಿ.16 ವಿಚಾರವಾಗಿ ನನ್ನ ತಂದೆ ನ್ಯಾಯಾಲಯದಲ್ಲಿ ಖಾಸಗಿ ಪ್ರಕರಣವನ್ನು ದಾಖಲಿಸಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಿಪಿ.20 ರ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಲ್ಲಿಸಿದ ತಕರಾರಿನ ಶೆಡ್ಯೂಲ್ ಸ್ವತ್ತಿನ ಬಗ್ಗೆ ಪ್ರತಿದಾವೆ ಸಲ್ಲಿಸಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿ ಬೇರೆ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಆಸ್ತಿ ಬೇರೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಆದಾರದ ಮೇಲೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿದ ಆಸ್ತಿಯ ಚೆಕ್ ಬಂದಿ ಉತ್ತರಕ್ಕೆ ಗುತ್ತೂರು ಗ್ರಾಮ ಗಡಿ, ಅದಾದ ಮೇಲೆ 2015 ರಲ್ಲಿ ಕಾಂಪೌಂಡ್ ವಾಲ್ ನ್ನು ಕಟ್ಟಲಾಗಿರುತ್ತದೆ ಎಂದು ತಕರಾರಿನ ಅನುಸೂಚಿಯಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ಪ್ರತಿವಾದ ಪತ್ರವನ್ನು ಸರಿಯಾಗಿ ಗಮನಿಸದೇ ತಪ್ಪು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ನಿಡಿ.1 ರಂತೆ ಆದೇಶ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಿಡಿ.1 ಓ ಎಸ್ 125/2010 ರಲ್ಲಿ ಹೇಳಿರುವ ಆಸ್ತಿಯ ವಾಸ್ತವಾಂಶಗಳನ್ನು ನಮ್ಮ ಪ್ರತಿವಾದ ಪತ್ರದಲ್ಲಿ, ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿಕೊಂಡಿಲ್ಲ

ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿಯ ಅಕ್ಕಪಕ್ಕದಲ್ಲಿ ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ ಬಂದಿ ಪೂರ್ವಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ಪಶ್ಚಿಮಕ್ಕೆ ಮಾಲೀಕರ ಆಸ್ತಿ, ದಕ್ಷಿಣಕ್ಕೆ ಮಾಲಿಕರ ಆಸ್ತಿ ಎಂದು ಬರೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ